ಇ) ಸರ್ಕಾರದ ಉಸ್ತುವಾರಿಯಲ್ಲಿ ಯಾವುದೇ ಗೋಮಾಳಗಳು ಇರುವುದಿಲ್ಲ.

ಈ) ಪಶುವೈದ್ಯರ ಕೊರತೆ ಇರುವ ಸಂಸ್ಥೆಗಳಲ್ಲಿ ಪರ್ಯಾಯ ವ್ಯವಸ್ಥೆಯಾಗಿ ಪ್ರಭಾರ ವ್ಯವಸ್ಥೆ ಮಾಡಿ ಹಾಗೂ ಸಂಚಾರಿ ಪಶು ಚಿಕಿತ್ಸೆ ವ್ಯವಸ್ಥೆಯಿಂದ ಪಶುಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಇರುವುದರಿಂದ, ಪಶುಗಳು ರೋಗರುಜಿನಗಳಿಂದ ಅಕಾಲಿಕ ಮೃತ್ಯು ಹೊಂದುತ್ತಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಕನ್ನಡ ಶಾಲೆ ಮುಚ್ಚುತ್ತಿರುವ ಬಗ್ಗೆ

563 (686) ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಅಧ್ಯಯನ ತಂಡವು ಪೂರ್ಣ ಪ್ರಮಾಣದ ಶಾಲಾ ದಾಖಲಾತಿ ಸಾಧ್ಯವಾಗಬೇಕಾದರೆ 1,241 ಹೊಸ ಶಾಲೆಗಳನ್ನು ತೆರೆಯುವುದು ಅವಶ್ಯವೆಂದು ವರದಿ ನೀಡಿದ್ದರೂ, ಕನ್ನಡ ಶಾಲೆಗಳನ್ನು ಯಾವ ಕಾರಣಕ್ಕಾಗಿ ಮುಚ್ಚಲಾಗಿದೆ?

ಆ) 2010-11ನೇ ಸಾಲಿನಲ್ಲಿ 39,841 ಮಕ್ಕಳು ಶಾಲೆ ಸೇರದೆ ಹೊರಗುಳಿದಿದ್ದಾರೆಂದು 2011-12 ರಲ್ಲಿ ಈ ಮಕ್ಕಳ ಸಂಖ್ಯೆ ದ್ವಿಗುಣವಾಗಿ 68,301 ರಷ್ಟಾಗಿದೆ ಎಂಬ ಮಾಹಿತಿಗಳು ದೊರೆದಿದ್ದು ಈ ಕುರಿತು ಸರ್ಕಾರದ ಅಧಿಕೃತ ಅಂಕಿ-ಅಂಶಗಳೇನು;

ಇ) ಕೇಂದ್ರ ಸರ್ಕಾರದ ಅಧ್ಯಯನ ತಂಡದ ವರದಿಯನ್ನು ಲೆಕ್ಕಿಸದೇ ಶಾಲೆಗಳನ್ನು ಮುಚ್ಚುತ್ತಿರುವುದಕ್ಕೆ ಕಾರಣವೇನು; ಈ ವರೆವಿಗೂ ರಾಜ್ಯದಲ್ಲಿ ಮುಚ್ಚಲ್ಪಟ್ಟ ಅಥವಾ ವಿಲೀನಗೊಂಡ ಶಾಲೆಗಳ ಸಂಖ್ಯೆ ಎಷ್ಟು;

ಈ) ಮಹಾಲಕ್ಷ್ಮೀ ಲೇಔಟ್‌ನ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದಾದರೂ ಕನ್ನಡ ಶಾಲೆ ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಉ) ಕನ್ನಡ ಶಾಲೆಗಳನ್ನು ಮಾತ್ರವಲ್ಲದೆ ಅಲೆಮಾರಿಗಳ ಆಶ್ರಮ ಶಾಲೆ, ದಲಿತರ ವಸತಿ ಶಾಲೆಗಳನ್ನು ಸಹ ಮುಚ್ಚಲು ಸರ್ಕಾರದ ಕ್ರಮವಹಿಸಿದ್ದು ಇದಕ್ಕೆ ಕಾರಣವೇನು?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 5 ಕ್ಕಿಂತ ಕಡಿಮೆ ಇರುವ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 10 ಕ್ಕಿಂತ ಕಡಿಮೆ ಇರುವ ಶಾಲೆಗಳನ್ನು ಮಾತ್ರ ಹತ್ತಿರದ ಶಾಲೆಗಳಿಗೆ ವಿಲಿನಗೊಳಿಸ ಲಾಗಿದೆಯೇ ಹೊರತು ಮುಚ್ಚಲಾಗಿಲ್ಲ.

ಆ) 2011–12ನೇ ಸಾಲಿನಲ್ಲಿ 39,841 ಮಕ್ಕಳು ಶಾಲೆಯಿಂದ ಹೊರಗುಳಿದ ಮಕ್ಕಳೆಂದು ಗುರುತಿಸಲಾಗಿದ್ದು, 2012–13ನೇ ಸಾಲಿನಲ್ಲಿ 68,301 ಮಕ್ಕಳನ್ನು ಗುರುತಿಸಲಾಗಿದ್ದು ಅದರಲ್ಲಿ 47,886 ಮಕ್ಕಳು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಹಗೂ ಹಿಂದಿನ ಸಾಲಿನಿಂದ ಮುಂದುವರೆದ ಮಕ್ಕಳು 20,415 (ಈ ಮಕ್ಕಳು ಮುಖ್ಯ ವಾಹಿನಿಗೆ ಬಂದಿದ್ದು ಪುನಃ ಶಾಲೆ ತೊರೆಯುವುದನ್ನು ನಿಯಂತ್ರಿಸಲು ಈ ಮಕ್ಕಳನ್ನು ಪ್ರಸಕ್ತ ಸಾಲಿನಲ್ಲಿ ವಿವಿಧ ಕಾರ್ಯ ತಂತ್ರದ ಮೂಲಕ ಗುರುತಿಸಲಾಗಿದೆ.

ಇ) ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 5 ಕ್ಕಿಂತ ಕಡಿಮೆ ಇರುವ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 10 ಕ್ಕಿಂತ ಕಡಿಮೆ ಇರುವ ಶಾಲೆಗಳನ್ನು ಮಾತ್ರ ಹತ್ತಿರದ ಶಾಲೆಗಳಿಗೆ ವಿಲೀನಗೊಳಿಸ ಲಾಗಿದೆಯೇ ಹೊರತು ಮುಚ್ಚಲಾಗಿಲ್ಲ.

ಈ) ಮತ್ತು ಉ) ಯಾವುದೇ ಕನ್ನಡ ಶಾಲೆಯನ್ನು ಮತ್ತು ಅಲೆಮಾರಿಗಳ ಆಶ್ರಮ ಶಾಲೆ, ದಲಿತರ ವಸತಿ ಶಾಲೆಗಳನ್ನು ಸಹ ಮುಚ್ಚಲು ಸರ್ಕಾರ ಉದ್ದೇಶಿಸಿರುವುದಿಲ್ಲ.

ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

531 (690) ಶ್ರೀ ಹಾಲಪ್ಪ ಹೆಚ್. (ಸೊರಬ ಕ್ಷೇತ್ರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಸಿ ಮತ್ತು ಡಿ ದರ್ಜೆ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು);